**ದಿನಾಂಕಃ 15.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 3 ನೇ ಪ್ರತಿವಾದಿ ಪರ ಶ್ರೀಮತಿ ಎಂ.ಸಿ.ಬಿ. ವಕೀಲರಿಂದಃ**

ನಾನು ಈ ವ್ಯಾಜ್ಯದಲ್ಲಿ 3 ನೇ ಪ್ರತಿವಾದಿಯಾಗಿದ್ದು, ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ನನ್ನ ವಕೀಲರಿಗೆ ನಾನೇ ನನ್ನ ಪರವಾಗಿ ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಅಂಶಗಳನ್ನು ಹೇಳಿ ಬರೆಸಿದ್ದು, ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಈ ಹಂತದಲ್ಲಿ ವಾದಿ ಪರ ವಕೀಲರು ಹಾಜರಿದ್ದು, ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ನುಡಿದಿದ್ದು, ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲುಃ 2(ಎ ಮತ್ತು ಬಿ) ಪ್ರತಿವಾದಿ ಪರ ಶ್ರೀ. ಎಂ.ವಿ.ಡಿ ವಕೀಲರಿಂದಃ**

ನ್ಯಾಯಾಲಯದ ಮುಂದೆ ದಾಖಲಿಸಿರುವ ಪ್ರಮಾಣ ಪತ್ರವನ್ನು ನಾನು ಓದದೇ ಸಹಿ ಹಾಕಿರುತ್ತೇನೆ. ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ವಾದಿಯು ಕರೆದುಕೊಂಡು ಬಂದಿರುತ್ತಾರೆ. ಕೆ.ಎಸ್. ಮಂಜುನಾಥ ಗೌಡ ರವರು ಮರಣ ಹೊಂದಿ ಎಷ್ಟು ವರ್ಷ ಆಯಿತು ಅಂದರೆ ಸಾಕ್ಷಿಯು 18-20 ವರ್ಷ ಆಯಿತು ಎಂದು ಉತ್ತರಿಸುತ್ತಾರೆ. ಸದರಿ ಕೆ.ಎಸ್. ಮಂಜುನಾಥ ಗೌಡ ರವರು ನನ್ನ ಮದುವೆ ಆದ ನಂತರ

ತೀರಿಕೊಂಡಿರುತ್ತಾರೆ. ನನ್ನ ಮದುವೆಯನ್ನು ನನ್ನ ತಂದೆ ಕೆ.ಎಸ್.ಶಿವಾನಂದ ಗೌಡ ರವರು ಮುಂದೆ ನಿಂತು ಮಾಡಿಸಿರುತ್ತಾರೆ. ಅವರು ಜೀವಂತ ಇರುವವರೆಗೂ ನಮ್ಮ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ನನ್ನ ತಂದೆ 2022 ರಲ್ಲಿ ತೀರಿಕೊಂಡ ನಂತರ ದಾವಾ ಸ್ವತ್ತನ್ನು 1 ಮತ್ತು 2 ನೇ ಪ್ರತಿವಾದಿ ಹಾಗೂ ವಾದಿಯು ಹಿಸ್ಸೆ ಮಾಡಿಕೊಂಡರು ಅಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನನ್ನು ಬಿಟ್ಟು ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಯಾವ ಆಸ್ತಿಗಳು ಯಾರ ಹಿಸ್ಸೆಗೆ ಹೋಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಾನು ಆರ್ಥಿಕವಾಗಿ ಅಷ್ಟೊಂದು ಚೆನ್ನಾಗಿ ಇರುವುದಿಲ್ಲ. ವಾದಿ ಹಾಗೂ ಪ್ರತಿವಾದಿ ಕುಟುಂಬದಲ್ಲಿ ಹಿಸ್ಸೆ ಆದರೂ ಸಹ ಸುಳ್ಳು ಹೇಳಿ ದಾವೆ ದಾಖಲಿಸಿ ಹಾಗೂ ಈ ಪ್ರಕರಣದಲ್ಲಿ ನನಗೆ ಸಾಕ್ಷಿ ನುಡಿಯಲು ಪ್ರಚೋಧಿಸಿರುತ್ತಾರೆ ಅಂದರೆ ಸರಿಯಲ್ಲ. 2012 ರಲ್ಲಿ ನನ್ನ ಕುಟುಂಬದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಅಂದರೆ ನನಗೆ ನೆನಪಿರುವುದಿಲ್ಲ. ಸದರಿ ಮಾರಾಟ ಮಾಡಿದ ಹಣವನ್ನು ನನ್ನ ತಂದೆಯವರು ಇಟ್ಟುಕೊಂಡಿರುತ್ತಾರೆ. ಮಕ್ಕಳಿಗೆ ನೀಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯು ನನ್ನನ್ನು ಸುಳ್ಳು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಅಂದರೆ ಸರಿಯಲ್ಲ. ನಾನು ಹಿಸ್ಸೆ ಕೋರಿ ದಾವೆ ದಾಖಲಿಸಿಲ್ಲ ಅಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೂ ಹಿಸ್ಸೆ ಬೇಕು ಎಂದು ಉತ್ತರಿಸುತ್ತಾರೆ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

O.S.127/2024
DW-1

**ಮರುವಿಚಾರಣೆಃ ಇಲ್ಲ.**

(**ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು**).

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**